# ಗಣಿತ

# MATHEMATICS

## ತರಗತಿ II

## STANDARD II

## ಭಾಗ 2

ಕೇರಳ ಸರಕಾರ
ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2016

KT 711-1/Maths-2(K) (Vol-II)

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ಬಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಹಾಗೂ ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

**State Council of Educational Research and Training (SCERT)**
Poojappura, Thiruvananthapuram 695012, Kerala


*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
First Edition : 2015, Reprint : 2016
Printed at : KBPS, Kakkanad, Kochi-30
© Department of Education, Government of Kerala

ಒಲವಿನ ಮಕ್ಕಳೇ,

ಗಣಿತದಲ್ಲಿ ಹಲವಾರು ವಿಚಾರಗಳನ್ನು
ನಾವು ತಿಳಿದುಕೊಂಡೆವು. ಗಣಿತದ
ವಿಶಾಲ ಜಗತ್ತು ನಮ್ಮ ಮುಂದೆ ತೆರೆದುಕೊಂಡಿದೆ.
ಗೆಳೆಯರೊಂದಿಗೆ ಕಥೆ ಹೇಳಿ ಮತ್ತು ಪದ್ಯ ಹಾಡಿ
ಆಟ ಆಡಿ ಆಲೋಚಿಸಿ ಹೊಸ ಲೆಕ್ಕಗಳನ್ನು
ಕರಗತ ಮಾಡಿಕೊಳ್ಳೋಣ.

ಪ್ರೀತಿ ಪೂರ್ವಕ

**ಡಾ.ಜೆ.ಪ್ರಸಾದ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.



# TEXT BOOK DEVELOPMENT TEAM

## Participants

**K.R. Muraleedharan Pillai**
Senior Lecturer, DIET, Kollam

**Sreekumar C.G.**
Govt. Co-operative A.L.P.S. Irumbanagad, Kollam

**C.V. Sajeevan**
Kariyil A.L.P.S., Thuruthi, Cheruvathur, Kasaragod

**M. Mahesh Kumar**
B.R.C. Cheruvathur, Kasaragod

**G. Rajalakshmi**
Unity A.U.P.S. Mannarkadu

**Vijayan C.K.**
Headmaster, G.T.L.P.S. Koombara

**Dhanesh**
A.M.L.P.S. Keezhmuri, Randathani

**Kunhambdulla M.**
Mooyipothu A.U.P,S., Kozhikode

### Experts

**Dr. C. Gokuladasan Pillai**
Former Curriculum Head SCERT

**Venugopal C.**
Asst. Professor, Govt. College of Teacher Education, Thiruvananthapuram

### Artists

**Rajeev N.T.**, G..H.S.S. Thariyod, Wayanadu

**Janu Manjery**

**Santhosh Veliyannur**

**Athulkumar T.A.**

### Kannada Version

**Sreekumari. K.**
AUPS Anekal

**Sreeharsha M.P.**
GWLPS Kasaragod

**Ravishankar. S.**
GJBS Peral

**Kumara Subrahmanya**
DIET Lab School, Maipady

### Language Expert

**Dr. Rathnakara Mallamoole**
Asst. Professor, Govt. College, Kasaragod

### Co - ordinator

**Faisal Mavulladathil**
Research officer, SCERT, Kerala

### Academic Co-ordinator

Dr. S. Jayalakshmi
Research Officer, SCERT


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (SCERT)
ವಿದ್ಯಾಭವನ, ಪೂಜಾಪುರ, ತಿರುವನಂತಪುರಂ - 695012

5. ಕಾಡು ನಮ್ಮ ಬೀಡು ........................................ 87

6. ಹನಿಗೂಡಿ ಹಳ್ಳ ........................................ 101

7. ಹಾಯ್ ಎಂಥಾ ರುಚಿ! ........................................ 113

8. ಒಂದು ಯಾತ್ರೆಯೂ ಹಲವು ವಿಚಾರಗಳು ............... 122





# 5

# ಕಾಡು ನಮ್ಮ ಬೀಡು



ಸರ್ಕಸ್ಸಿನವರು ಮತ್ತು ಕಾಡುಗಳ್ಳರು ಕಾಡಿನ ಗಡಿಗೆ ಬಂದರು ಪ್ರಾಣಿಗಳೆಲ್ಲವೂ ಹೆದರಿ ನಡುಗಿದವು.

ಸಿಂಹರಾಜ ಕಾಡಿನಲ್ಲಿದ್ದವರನ್ನೆಲ್ಲ ಬರಲು ಹೇಳಿತು.

“ಆಕ್ರಮಣ ಮಾಡಲು ಬರುವವರನ್ನು ತಡೆಯಬೇಕು. ಯಾರೊಬ್ಬರೂ ಕಾಡಿನೊಳಗೆ ಪ್ರವೇಶಿಸದಂತೆ ತಡೆಯಬೇಕು.

“ಸರಿ” ಎಲ್ಲವೂ ಒಪ್ಪಿದವು.

ನಮ್ಮಲ್ಲಿ ಕೆಲವರು ಕಾವಲುಗಾರರಾಗಿ ನಿಲ್ಲಬೇಕು.

ಸಿಂಹರಾಜ ಹೇಳಿತು.

ಹಾರಾಡುವವರು ಕೂಡಾ ಕಾವಲು ಕಾಯಬೇಕು.

ಆನೆಯಣ್ಣ ನೆನಪಿಸಿತು.

ಕಾವಲುಗಾರರಾಗುವವರ ಲೆಕ್ಕ ತೆಗೆಯುವುದು ಯಾರು?

ಸಿಂಹರಾಜ ಕೇಳಿತು.

## ಲೆಕ್ಕ ತೆಗೆಯುವುದು

ಲೆಕ್ಕ ತೆಗೆಯುವ ಜವಾಬ್ದಾರಿಯನ್ನು ಮಂಗಣ್ಣನಿಗೆ ನೀಡಲಾಯಿತು. ಕಾವಲುಗಾರರಾಗಲು ಸಿದ್ಧರಾದವರ ಪಟ್ಟಿಯನ್ನು ನೋಡಿರಿ.

| | |
|---|---|
| ಸಿಂಹ | 30 |
| ಹುಲಿ | 26 |
| ಪಟ್ಟೆ ಹುಲಿ | 25 |
| ಆನೆ | 42 |
| ರಣಹದ್ದು | 52 |
| ಗಿಡುಗ | 41 |



ಇವುಗಳನ್ನು ಕಡಿಮೆ ಸಂಖ್ಯೆಯಿಂದ ಹೆಚ್ಚು ಸಂಖ್ಯೆಗೆ ಅನುಕ್ರಮವಾಗಿ ಬರೆಯೋಣ.

| | | | | | | |
|---|---|---|---|---|---|---|
| ಕಾವಲುಗಾರರಾಗಲು ಸಿದ್ಧರಾದವರು | | | | | | |
| ಸಂಖ್ಯೆ | | | | | | |


## ಆಯ್ಕೆಯಾದವರು

ಕಾವಲುಗಾರರಾಗಲು ಯೋಗ್ಯರಾದವರನ್ನು ಸಿಂಹರಾಜ ಆಯ್ಕೆ ಮಾಡಿತು. ಅವರ ಸಂಖ್ಯೆಯನ್ನು ನೋಡಿರಿ.


| | |
|---|---|
| ಸಿಂಹ | 18 |
| ಹುಲಿ | 17 |
| ಪಟ್ಟೆ ಹುಲಿ | 16 |
| ಆನೆ | 34 |
| ರಣಹದ್ದು | 33 |
| ಗಿಡುಗ | 32 |







ಒಟ್ಟು 26 ಹುಲಿಗಳಿಂದ 17 ಹುಲಿಗಳನ್ನು ಕಾವಲಗಾರರಾಗಿ ಆಯ್ಕೆ ಮಾಡಲಾಯಿತು. ಉಳಿದವುಗಳೆಷ್ಟು?



ಹೇಗೆ ಕಂಡುಹಿಡಿಯಬಹುದು.

26 ರಿಂದ 17 ನ್ನು ಕಳೆಯಬೇಕು.

26 ರಿಂದ 10ನ್ನು ಮತ್ತು 7ನ್ನು ಕಳೆಯಬೇಕು

26 ರಿಂದ 10ನ್ನು ಕಳೆದಾಗ [ ]

16 ರಿಂದ 7 ನ್ನು ಕಳೆದಾಗ [ ]

ಅಂದರೆ, 26 - 17 = [ ]

ಉಳಿದ ಹುಲಿಗಳ ಸಂಖ್ಯೆ = .....................

| 26- | 16- |
|---|---|
| 10 | 7 |
| 16 | 9 |


- 30 ಸಿಂಹಗಳಿಂದ 18 ಸಿಂಹಗಳನ್ನು ಕಾವಲುಗಾರರಾಗಿ ಆಯ್ಕೆ ಮಾಡಲಾಯಿತು ಉಳಿದ ಸಿಂಹಗಳೆಷ್ಟು?

ಒಟ್ಟು ಸಿಂಹಗಳು = [ ]

ಕಾವಲುಗಾರರಾಗಿ ಆಯ್ಕೆಯಾದ ಸಿಂಹಗಳು = [ ]

ಉಳಿದವುಗಳು = [ ]

| 20- | 10- |
|---|---|
| 10 | 8 |
| | |



ನಂದನ ಕಂಡುಹಿಡಿದ ರೀತಿ

| 30- | 20 + 10 - |
|---|---|
| 18 | 10 + 8 |
| | 10 + 2 = 12 |

30 ರಿಂದ 18 ಕಳೆಯಲು ಬೇರೆ ಯಾವುದಾದರೂ ರೀತಿಯನ್ನು ಕಂಡುಹಿಡಿಯಬಹುದೇ?

**ಉಳಿದವುಗಳು ಎಷ್ಟು?**

| ಪಟ್ಟೆ ಹುಲಿ | ಆನೆ | ರಣಹದ್ದು | ಗಿಡುಗ |
|---|---|---|---|
| 25- 16 | | | |

## ಜೊತೆಯಾಗಿ ಹೋಗುವವರು

ಕಾವಲುಗಾರರಾಗಿ ಪ್ರತಿ ದಿವಸವೂ ಎರಡು ಗುಂಪುಗಳು ಹೋಗುತ್ತವೆ ಎರಡು ಗುಂಪೂ ಸೇರಿ 50 ಆಗುವಂತೆ ಗುಂಪು ಮಾಡಿರಿ.

ಯಾವೆಲ್ಲ ಗುಂಪುಗಳು ಸೇರಿದರೆ 50 ಆಗಬಹುದು.



18




17



16



33



34



32

| | |
|---|---|
| ಸಿಂಹ | 18 |
| ............... | ... |
| ಒಟ್ಟು | **50** |

| | |
|---|---|
| | |
| | |
| ಒಟ್ಟು | |

| | |
|---|---|
| | |
| | |
| ಒಟ್ಟು | |

ಆಕ್ರಮಣಗಾರರು ಕಾಡನ್ನು ಬಿಟ್ಟು ಹೋಗಲಿಲ್ಲ. ಕಾವಲು ಕಾಯುವುದನ್ನು ಮುಂದುವರಿಸಬೇಕು. ಕಾವಲುಗಾರರು ಆಹಾರವನ್ನು ಹುಡುಕಿ ಹೋಗಬೇಕಾಗಿಲ್ಲ. ಅವರಿಗಾಗಿ ಆಹಾರವನ್ನು ನಾವು ತಯಾರಿಸಬೇಕು. ಸಿಂಹ ಹೇಳಿತು.

ಕೆಲವು ಪ್ರಾಣಿಗಳು ಅಡುಗೆ ಮಾಡಲು ಸಿದ್ಧರಾದವು. ಅವುಗಳ ಸಂಖ್ಯೆಯನ್ನು ಸೂಚಿಸುವ ಪಟ್ಟಿಯನ್ನು ನೋಡಿರಿ.

| | |
|---|---|
| ಜಿಂಕೆ | 62 |
| ಮಂಗ | 50 |
| ಮೊಲ | 86 |
| ಅಳಿಲು | 48 |

ಅವುಗಳನ್ನು ಹೆಚ್ಚು ಸಂಖ್ಯೆಯಿಂದ ಕಡಿಮೆ ಸಂಖ್ಯೆಗೆ ಕ್ರಮೀಕರಿಸಿ ಬರೆಯಿರಿ.

| | | | | |
|---|---|---|---|---|
| ಅಡುಗೆ ಮಾಡಲು ಸಿದ್ಧರಾದವರು | | | | |
| ಸಂಖ್ಯೆ | | | | |

- ಮೊದಲ ದಿನ 47 ಜಿಂಕೆಗಳು ಮತ್ತು 20 ನರಿಗಳು ಕಟ್ಟಿಗೆ ತರಲು ಹೋದವು. ಉಳಿದವರು ಅಡುಗೆ ಕೆಲಸ ಮಾಡಿದವು. ಅಡುಗೆ ಕೆಲಸ ಮಾಡಿದವರು ಎಷ್ಟು?

ಜಿಂಕೆ ☐

ನರಿ ☐

- ಎರಡನೇ ದಿನ 70 ಮೊಲಗಳು ಮತ್ತು 32 ಅಳಿಲುಗಳು ಅಡುಗೆ ಕೆಲಸ ಮಾಡಿದವು ಉಳಿದವು ಸೌದೆ ತರಲು ಹೋದವು. ಸೌದೆ ತರಲು ಹೋದವುಗಳೆಷ್ಟು?

ಮೊಲ ☐

ಅಳಿಲು ☐

## ಅಡುಗೆ ಮನೆ ಕಟ್ಟುವ



ಕಾವಲುಗಾರರಿಗೆ ಆಹಾರ ತಯಾರಿಸಲು ದೊಡ್ಡ ಅಡುಗೆ ಮನೆ ಬೇಕು. ಅಡುಗೆ ಮನೆ ಕಟ್ಟುವುದು ಯಾರು ಯಾರು?

ಜಿರಾಫೆ, ಮೊಲ, ಗಿಳಿ.

ಅಡುಗೆ ಮನೆ ಕಟ್ಟಲು 34 ದಂಡಗಳು ಬೇಕು. 18 ದಂಡಗಳನ್ನು ಅವು ತಂದವು. ಇನ್ನು ಎಷ್ಟು ದಂಡಗಳು ಬೇಕು?

☐

““ಮೇಲೆ ಇರಿಸಲು ಉದ್ದದ ದಂಡ ಬೇಕು” ಗಿಳಿ ಹೇಳಿತು.

## ಉದ್ದ ನೋಡುವ ವರ್ಗೀಕರಿಸುವ


ಜಿರಾಫೆ, ಮೊಲ, ಗಿಳಿ ಮೊದಲಾದವುಗಳು ತಂದ ದಂಡಗಳನ್ನು ನೋಡಿರಿ.

ಅತೀ ಉದ್ದದ ದಂಡ – 1

ಅದಕ್ಕಿಂತ ಕಡಿಮೆ ಉದ್ದದ ದಂಡ – 2

ಅತೀ ಕಡಿಮೆ ಉದ್ದದ ದಂಡ – 3

ಈ ರೀತಿ ನಂಬ್ರ ಹಾಕಿರಿ.



## ಉದ್ದವನ್ನು ಕಂಡುಹಿಡಿಯುವ

### ಕೈಯಿಂದ ಅಳೆಯುವ



ತರಗತಿಯಲ್ಲಿ ಹೆಚ್ಚು ಉದ್ದವಿರುವುದು ಯಾವುದು

ಮೇಜಿಗೋ ಕರಿಹಲಗೆಗೋ?

ಚಿತ್ರದಲ್ಲಿ ತೋರಿಸಿದಂತೆ ಕೈಯಿಂದ ಅಳೆಯುವ.

ಮೇಜಿನ ಉದ್ದ = ________ ಗೇಣು

ಕರಿಹಲಗೆಯ ಉದ್ದ = ________ ಗೇಣು

ಹೆಚ್ಚು ಉದ್ದ ಯಾವುದು?

***ಗೇಣು***

*ಹಿಂದಿನ ಕಾಲದಲ್ಲಿ ಚಿತ್ರದಲ್ಲಿರುವಂತೆ ಕೈ ಬೆರಳುಗಳನ್ನು ಹಿಡಿದು ಅಳೆಯುತ್ತಿದ್ದರು. ಈ ದೂರವನ್ನು ಒಂದು ಗೇಣು ಎಂದು ಹೇಳುತ್ತಿದ್ದರು.*

### ಪಾದದಿಂದ ಅಳೆಯುವ



ತರಗತಿಯ ಯಾವ ಬದಿಯ ಉದ್ದ ಹೆಚ್ಚು ಪಾದವನ್ನು ಉಪಯೋಗಿಸಿ ಅಳೆಯಿರಿ.

ಒಂದನೇ ಬದಿಯ ಉದ್ದ = ________ ಹೆಜ್ಜೆ

ಎರಡನೇ ಬದಿಯ ಉದ್ದ = ________ ಹೆಜ್ಜೆ

ಯಾವ ಬದಿಯ ಉದ್ದ ಹೆಚ್ಚು

ಎಷ್ಟು ಹೆಚ್ಚು? ________ ಹೆಜ್ಜೆ

ಎಲ್ಲರೂ ಅಳೆದಾಗ ಇದು ಒಂದೇ ರೀತಿಯಾಗಿದೆಯೇ?

ಯಾಕೆ?

***ಹೆಜ್ಜೆ***

*ಪಾದವನ್ನುಪಯೋಗಿಸಿ ಹಿಂದಿನ ಕಾಲದಲ್ಲಿ ಉದ್ದವನ್ನು ಅಳೆಯುತ್ತಿದ್ದರು. ಒಂದು ಪಾದದ ಉದ್ದವನ್ನು ಒಂದು ಹೆಜ್ಜೆ ಎಂದು ಕರೆಯುತ್ತಿದ್ದರು.*

### ದಂಡದಿಂದ ಅಳೆಯುವ

ಶಾಲಾ ಕಟ್ಟಡದ ಉದ್ದವನ್ನು ಒಂದು ದಂಡವನ್ನುಪಯೋಗಿಸಿ ಅಳೆಯಿರಿ. ಸಿಕ್ಕಿದ ಉದ್ದವೆಷ್ಟು? ____ದಂಡ


ಎಲ್ಲರೂ ಉಯೋಗಿಸಿದ ದಂಡದ ಉದ್ದ ಒಂದೇ ರೀತಿಯಾಗಿತ್ತೇ?

### ಕಂಡುಹಿಡಿಯಬಹುದೇ?

- ನಿಮ್ಮ ತರಗತಿಯಲ್ಲಿ ಅತಿ ಉದ್ದವಿರುವ ಬೆಂಚು ಯಾವುದು?
- ಕರಿಹಲಗೆಯಲ್ಲಿ ಬಿಡಿಸಿದ ಎರಡು ಗೆರೆಗಳಲ್ಲಿ ಹೆಚ್ಚು ಉದ್ದದ ಗೆರೆ ಯಾವುದು?

### ಜಿಗಿಯುವ ಸ್ಪರ್ಧೆ

ಹಿರಿಯರು ಅಡುಗೆ ಮನೆ ಕಟ್ಟುವಾಗ ಮಕ್ಕಳು ಜಿಗಿಯುವ ಸ್ಪರ್ಧೆ ನಡೆಸಿದವು.



ಗೆಳೆಯರಲ್ಲಿ ಅತಿ ದೂರ ಜಿಗಿಯಲು ಯಾರಿಗೆ ಸಾಧ್ಯ?



### ಜಿಗಿಯುವ ಸ್ಪರ್ಧೆ ನಡೆಸುವ


ದೂರವನ್ನಳೆಯಲು ಒಂದು ದಂಡವನ್ನು ಬಳಸುವಿರಲ್ಲವೇ. ಹೆಚ್ಚು ದೂರ ಜಿಗಿದ 4 ಜನರ ಹೆಸರು ಮತ್ತು ಜಿಗಿದ ದೂರವನ್ನು ಪಟ್ಟಿಯಲ್ಲಿ ಬರೆಯಿರಿ.

| | ಹೆಸರು | ಜಿಗಿದ ದೂರ |
|---|---|---|
| 1. | ........................................................ | ............. ದಂಡ |
| 2. | ........................................................ | ............. ದಂಡ |
| 3. | ........................................................ | ............. ದಂಡ |
| 4. | ........................................................ | ............. ದಂಡ |


## ಸೌದೆ ಕಟ್ಟುಗಳು

ಅಡುಗೆ ತಯಾರಿಸಲು ತಂದ ಸೌದೆ ಕಡಿಮೆಯಾಯಿತು. ಸೌದೆ ತರಲು ಆನೆ, ಕುದುರೆ, ಕತ್ತೆ ಮತ್ತು ಒಂಟೆ ಸಹಾಯಮಾಡಿದವು. 10 ಸೌದೆ ತುಂಡುಗಳನ್ನು ಸೇರಿಸಿ ಒಂದು ಕಟ್ಟು ಮಾಡಿದವು. ಹೀಗೆ ತುಂಬ ಸೌದೆ ಕಟ್ಟುಗಳು ಸಿದ್ಧವಾದವು.


ಕುದುರೆ ತಂದದ್ದು



ಒಟ್ಟು [ ]



ಕತ್ತೆ ತಂದದ್ದು



ಒಟ್ಟು [ ]



ಕುದುರೆ ಮತ್ತು ಕತ್ತೆ ತಂದ ಒಟ್ಟು ಸೌದೆಗಳೆಷ್ಟು?

ಹೇಗೆ ಕಂಡುಹಿಡಿಯಬಹುದು?

20 ಮತ್ತು 30 ಸೇರಿದರೆ 40

6 ಮತ್ತು 2 ಸೇರಿದರೆ 8

ಒಟ್ಟು 50 ಮತ್ತು 8 ಸೇರಿದರೆ 58

$$\begin{array}{r} 20 + 6 \\ 30 + 2 \\ \hline 50 + 8 \end{array}$$


**ಈ ರೀತಿ ಮಾಡೋಣವೇ**


| ಹತ್ತುಗಳು | ಒಂದುಗಳು |
|---|---|
| 2 | 6 + |
| 3 | 2 |
| **5** | **8** |

ಹತ್ತುಗಳು, ಒಂದುಗಳು ಎಂದು ಬರೆಯದೆಯೂ ಕೂಡಿಸಬಹುದಲ್ಲವೇ.


$$\begin{array}{r} 26 \; + \\ 32 \\ \hline 58 \end{array}$$

ಬಳಿಕ ಆನೆ ಮತ್ತು ಒಂಟೆ ಸೌದೆಯನ್ನು ತಂದವು.





ಆನೆ ತಂದ ಸೌದೆ [ ]





ಒಂಟೆ ತಂದ ಸೌದೆ [ ]

ತಂದ ಒಟ್ಟು ಸೌದೆಯ ಸಂಖ್ಯೆ ಎಷ್ಟು?

20 + 30 = 50

5 + 7 = 12

ಒಟ್ಟು = 50 + 12

= 50 + 10 + 2

= 60 + 2

= 62

| ಹತ್ತುಗಳು | ಒಂದುಗಳು |
|---|---|
| 2 | 5 + |
| 3 | 7 |
| **5** | **1 2** |

12 ಎಂದರೆ

10 + 2

ಆಗಿದೆಯಲ್ಲವೆ ಎಂದರೆ ಒಂದು ಹತ್ತುಗಳು ಮತ್ತು 2 ಒಂದುಗಳು

| ಹತ್ತುಗಳು | ಒಂದುಗಳು |
|---|---|
| 2 | 5 + |
| 3<br>**1** | 7 |
| **6** | **1 2** |

12ರಲ್ಲಿರುವ 1 ಹತ್ತನ್ನು ಹತ್ತುಗಳ ಜೊತೆ ಸೇರಿಸಲಾಯಿತು.

| |
|---|
| 25 + |
| 37 |
| **62** |

## ಒಟ್ಟು ಎಷ್ಟು?

- ಆಹಾರಕ್ಕಾಗಿ ಆನೆಯು 18 ಚೀನಿಕಾಯಿಗಳನ್ನು ಮತ್ತು ಜಿಂಕೆ 13 ಚೀನಿಕಾಯಿಗಳನ್ನು ತಂದವು ಎರಡೂ ಸೇರಿ ಎಷ್ಟು ಚೀನಿಕಾಯಿಗಳನ್ನು ತಂದವು?


| ಹತ್ತುಗಳು | ಒಂದುಗಳು |
|---|---|
| | |
| | |

ಆನೆ ತಂದ ಚೀನಿಕಾಯಿಗಳು ☐

ಜಿಂಕೆ ತಂದ ಚೀನಿಕಾಯಿಗಳು ☐

ಎರಡೂ ಸೇರಿ ತಂದ ಚೀನಿಕಾಯಿಗಳು ☐


- ಮೊಲ 26 ಕ್ಯಾರೆಟ್‌ಗಳನ್ನು ಮತ್ತು ಮಂಗ 28 ಕ್ಯಾರೆಟ್‌ಗಳನ್ನು ತಂದವು. ಅದನ್ನು ಒಂದು ಗೋಣಿಯಲ್ಲಿ ತುಂಬಿಸಿದವು. ಈಗ ಗೋಣಿಯಲ್ಲಿ ಎಷ್ಟು ಕ್ಯಾರಟ್‌ಗಳಿವೆ?



## ಬಲುದೂರ

ಕಾವಲುಗಾರರ ಕಣ್ಣು ತಪ್ಪಿಸಿ ಸರ್ಕಸ್ಸಿನವರು ಜಿಂಕೆ ಮರಿಯನ್ನು ಹಿಡಿದರು. ಸಿಂಹರಾಜನನ್ನು ಕಂಡು ತಮ್ಮ ದುಃಖವನ್ನು ಹೇಳಲು ಜಿಂಕೆಗಳು ತೀರ್ಮಾನಿಸಿದವು.

ಸಿಂಹರಾಜನನ್ನು ಕಾಣಲು ಎರಡು ಗುಂಪುಗಳಾಗಿ ಜಿಂಕೆಗಳು ಬರುವುದನ್ನು ದೂರದಿಂದಲೇ ದೂತರಾದ ನರಿಗಳು ಕಂಡವು.




ಜಿಂಕೆಗಳ ಒಟ್ಟು ಸಂಖ್ಯೆ ಕೆಳಗೆ ಕೊಟ್ಟಿರುವವುಗಳಲ್ಲಿ ಯಾವುದು ಅದಕ್ಕೆ ✓ ಗುರುತು ಹಾಕಿರಿ.

| | | |
|---|---|---|
| 20 ಕಡಿಮೆ | 20 | 20 ಕ್ಕಿಂತ ಹೆಚ್ಚು |

## ಊಹಿಸಿ ಹೇಳುವ

ಸರಿಯಾದುದಕ್ಕೆ ✓ ಗುರುತು ಹಾಕಿರಿ.

| | | | |
|---|---|---|---|
| • 38 ಮತ್ತು 23 ಕೂಡಿಸಿದರೆ | 60 ಕ್ಕಿಂತ ಕಡಿಮೆ | 60 | 60 ಕ್ಕಿಂತ ಹೆಚ್ಚು |
| • 16 ಮತ್ತು 55 ಕೂಡಿಸಿದರೆ | 70 ಕ್ಕಿಂತ ಕಡಿಮೆ | 70 | 70 ಕ್ಕಿಂತ ಹೆಚ್ಚು |
| • 36 ಮತ್ತು 18 ಕೂಡಿಸಿದರೆ | 50 ಕ್ಕಿಂತ ಕಡಿಮೆ | 50 | 50 ಕ್ಕಿಂತ ಹೆಚ್ಚು |

ಆಕ್ರಮಣಕಾರರನ್ನು ಓಡಿಸಲೇ ಬೇಕು. ಹೀಗೆ ಹೆದರಿ ಬದುಕಲು ಸಾಧ್ಯವಿಲ್ಲ.

ಕಾವಲುಗಾರರು ಒಟ್ಟು ಸೇರಿದವು.

ಜೇನುನೊಣಗಳ ಮತ್ತು ಕಣಜದ ಹುಳಗಳ ಸೈನ್ಯವು ಬಂದಿತು. ಎಲ್ಲವೂ ಕಾಡಿನ ಗಡಿಯ ಕಡೆಗೆ ನಡೆದವು. ಗುಂಪಾಗಿ ಬರುವ ಪ್ರಾಣಿಗಳನ್ನು ಮತ್ತು ಇತರ ಜೀವಿಗಳನ್ನು ಕಂಡ ಆಕ್ರಮಣಕಾರರು ಹೆದರಿದರು. ಅವರು ಜೀವವನ್ನು ಕೈಯಲ್ಲಿ ಹಿಡಿದು ಓಡಿ ಹೋದರು.



## ಒಂದೇ ಉತ್ತರ

ಯಾವ ಯಾವ ಎರಡು ಸಂಖ್ಯೆಗಳನ್ನು ಸೇರಿಸಿದರೆ ಒಂದೇ ಉತ್ತರ ಸಿಗುವುದು.

| | | | | |
|---|---|---|---|---|
| 25 | 16 | 26 | 15 | 17 |

## ಯಾವುದು ಸರಿ? ಕಂಡುಹಿಡಿಯುವ

ರಾಹುಲ್ 15 ನೆಲ್ಲಿಕಾಯಿಗಳನ್ನು ಮತ್ತು ಸುನಿಲ್ 6 ನೆಲ್ಲಿಕಾಯಿಗಳನ್ನು ಅಬುವಿಗೆ ನೀಡಿದನು. ಅಬುವಿನ ಕೈಯಲ್ಲಿ ಈಗ ಎಷ್ಟು ನೆಲ್ಲಿಕಾಯಿಗಳಿವೆ.

ಈ ಪ್ರಶ್ನೆಗೆ ಕೆಲವು ಮಕ್ಕಳು ಬರೆದ ಉತ್ತರವನ್ನು ನೋಡಿರಿ.

15+
6
———
111

ರಾಣಿ

15 +
6
———
75

ನಂದು

15+
6
———
21

ಡೇವಿಡ್

15+
6
———
11

ರಹೀಂ

15+
6
———
211

ರಾಜೀವ್

ಸರಿಯಾದ ಉತ್ತರ ಯಾರದ್ದು?

ಪ್ರತಿಯೊಬ್ಬರ ಉತ್ತರಗಳನ್ನು ಕುರಿತು ಚರ್ಚಿಸಿರಿ.



## ಮಾಡಿ ನೋಡುವ

1. ಕೆಳಗೆ ಕೊಡಲಾದ ಸಂಖ್ಯೆಗಳನ್ನು ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಗೆ ಅನುಕ್ರಮವಾಗಿ ಬರೆಯಿರಿ.

58 16 94 45 24 190 128 99 175 200

2. ಬಾಯಿಲೆಕ್ಕವಾಗಿ ಉತ್ತರ ಬರೆಯಿರಿ.

- 99 ರಿಂದ 10 ಕಳೆದಾಗ ☐
- 99 ಕ್ಕೆ 10 ಕೂಡಿಸಿದಾಗ ☐
- 105 ರಿಂದ 10 ಕಳೆದಾಗ ☐
- 120 - 20 = ☐
- 108 + 10 = ☐
- 109 - 9 = ☐
- 109 - 10 = ☐

3. ಜೊತೆಗಾರರನ್ನು ಕಂಡುಹಿಡಿಯುವ

ಎರಡು ಸಂಖ್ಯೆಗಳನ್ನು ಪರಸ್ಪರ ಕೂಡಿಸಿದಾಗ 30 ಸಿಗಬೇಕು.

| | | | | | |
|---|---|---|---|---|---|
| 15 | 25 | 11 | 10 | 19 | 29 |
| 21 | 1 | 20 | 5 | 15 | 9 |

ಕಂಡುಹಿಡಿದ ಜೋಡಿಗಳನ್ನು ಕೆಳಗೆ ಬರೆಯಿರಿ.

- ____________, ____________
- ____________, ____________
- ____________, ____________
- ____________, ____________
- ____________, ____________
- ____________, ____________

4) ಪೆನ್ಸಿಲಿನಿಂದ ಉದ್ದವನ್ನು ಅಳೆದು ಬರೆಯಿರಿ.

- ಬೆಂಚಿನ ಉದ್ದ ☐ ಪೆನ್ಸಿಲ್
- ಗೆಳೆಯನ ಕೈಯ ಉದ್ದ ☐ ಪೆನ್ಸಿಲ್

5) ಎರಡನೇ ತರಗತಿಯ ಮನು ಮತ್ತು ದೇವಿಕಳ ಹುಟ್ಟುಹಬ್ಬ ಒಂದೇ ದಿನ ಬರುತ್ತದೆ. ಮನು 38 ರೂಪಾಯಿಗಳು ಮತ್ತು ದೇವಿಕ 36 ರೂಪಾಯಿಗಳ ಪುಸ್ತಕಗಳನ್ನು ಕೊಡುಗೆಯಾಗಿ ಶಾಲೆಗೆ ನೀಡಿದರು. ಒಟ್ಟು ಎಷ್ಟು ರೂಪಾಯಿಯ ಪುಸ್ತಕಗಳು ಶಾಲೆಗೆ ದೊರೆತವು?



# 6 ಹನಿಗೂಡಿ ಹಳ್ಳ

ಜನವರಿ 12 ಮಂಗಳ

ಈ ದಿನ ಬೀನಾ ಟೀಚರ್ ಪ್ರಯೋಗ ಮಾಡಲು ಹೇಳಿದರು. ನೀರನ್ನು ಉಪಯೋಗಿಸಿ ನಡೆಸುವ ಪ್ರಯೋಗಗಳು.

ನನ್ನ ಗುಂಪಿನಲ್ಲಿ ನಾವು ತುಂಬಾ ಪ್ರಯೋಗಗಳನ್ನು ಮಾಡಿದೆವು. ಎಲ್ಲವೂ ನನಗೆ ಇಷ್ಟವಾಯಿತು. ಎರಡು ಬಾಲ್ದಿಗಳಲ್ಲಿ, ಯಾವ ಬಾಲ್ದಿಯಲ್ಲಿ ಹೆಚ್ಚು ನೀರು ಹಿಡಿಯಬಹುದು? ಎಂದು ಅಂದಾಜಿಸಿ ಹೇಳುವ ಚಟುವಟಿಕೆಯೂ ಇತ್ತು. ನಾನು ಅಂದಾಜಿಸಿ ಹೇಳಿರುವುದು ಸರಿಯಾಗಿತ್ತೆಂದು ಆಮೇಲೆ ಕಂಡುಹಿಡಿದೆ.



ರೇಖಾಳ ದಿನಚರಿಯನ್ನು ಓದಿದಿರಲ್ಲವೇ. ಅವಳು ಊಹಿಸಿ ಹೇಳಿರುವುದು ಸರಿಯೆಂದು ಹೇಗೆ ಕಂಡುಕೊಂಡಳು?

## ಯಾವುದರಲ್ಲಿ ಹೆಚ್ಚು?

ನಿಮ್ಮ ತರಗತಿಗೆ ಟೀಚರ್ ತಂದ ಬಾಲ್ದಿಯನ್ನು ನೋಡಿದಿರಲ್ಲವೇ? ಹೆಚ್ಚು ನೀರು ಹಿಡಿಯುವುದು ಯಾವ ಬಾಲ್ದಿಯಲ್ಲಿ?

ನಾನು ಅಂದಾಜಿಸಿದ್ದು ☐

ನಾನು ಅಂದಾಜಿಸಿದ್ದು ಸರಿಯೇ ಎಂದು ಹೇಗೆ ಕಂಡುಹಿಡಿಯಬಹುದು? ಅಳೆದು ನೋಡಿರಿ.

ನಾನು ಅಂದಾಜಿಸಿದ್ದು ☐ ಸರಿಯಾಗಿದೆ ☐ ಸರಿಯಾಗಿಲ್ಲ

## ಎಷ್ಟು ಗಿಡಗಳಿಗೆ ನೀರು ಹಾಕಬಹುದು?

- ಪ್ರತಿಯೊಂದು ಗಿಡಕ್ಕೂ ಒಂದೊಂದು ಪಾಟೆ ನೀರು ಎರೆಯಬೇಕು. ಒಂದು ಬಾಲ್ದಿ ನೀರಿನಿಂದ ಎಷ್ಟು ಗಿಡಗಳಿಗೆ ನೀರು ಹಾಕಬಹುದು?

  ನಾನು ಅಂದಾಜಿಸಿದ್ದು [ ]

- ತರಗತಿಯ ಮಕ್ಕಳನ್ನು ನಾಲ್ಕು/ಐದು ಮಂದಿಯ ಗುಂಪುಗಳನ್ನಾಗಿ ಮಾಡುವುದು.
- ಪ್ರತಿಯೊಂದು ಗುಂಪೂ ಒಂದು ಬಾಲ್ದಿ ಮತ್ತು ಸಮಾನ ಅಳತೆಯ ಒಂದು ಪಾಟೆ ತೆಗೆದುಕೊಳ್ಳುವುದು.
- ಬಾಲ್ದಿಯಲ್ಲಿ ತುಂಬಾ ನೀರನ್ನು ತೆಗೆದುಕೊಳ್ಳಬೇಕು.
- ಒಂದು ಪಾಟೆ ನೀರಿನಂತೆ ಪ್ರತಿಯೊಂದು ಗಿಡಕ್ಕೂ ಎರೆಯುವುದು.




- ಅಂದಾಜಿಸಿ ಹೇಳಿರುವುದು ಮತ್ತು ಕಂಡುಹಿಡಿದು ಹೇಳಿರುವುದು ತಮ್ಮಲ್ಲಿ ವ್ಯತ್ಯಾಸವಿದೆಯೇ?
- ಇದ್ದರೆ ಎಷ್ಟು?
- ಎಲ್ಲಾ ಗುಂಪಿನವರೂ ನೀರು ಹಾಕಿದ ಗಿಡಗಳ ಸಂಖ್ಯೆ ಸಮಾನವೇ? ಯಾಕೆ?

ನೀರಿನ ಕುರಿತು ಟೀಚರ್ ಹೇಳಿದ ವಿಚಾರಗಳನ್ನು ರೇಖಾ ನೆನಪಿಸಿದಳು.



ಉತ್ತಮ ಆರೋಗ್ಯಕ್ಕೆ ಅಗತ್ಯವಿರುವಷ್ಟು ನೀರು ಕುಡಿಯಬೇಕು.

- ತರಗತಿಯಲ್ಲಿ ಯಾವ ಪಾತ್ರೆಯಲ್ಲಿ ನೀರು ಸಂಗ್ರಹಿಸಿ ಇಡುತ್ತಾರೆ?
- ಪಾತ್ರೆಯಲ್ಲಿ ತಂದಿರಿಸಿದ ನೀರು ತರಗತಿಯಲ್ಲಿ ಇರುವವರಿಗೆಲ್ಲಾ ಕುಡಿಯಲು ಸಾಕಾಗುತ್ತದಯೇ?
- ನಿಮ್ಮ ತರಗತಿಯ ಪಾತ್ರೆಯಲ್ಲಿ ಎಷ್ಟು ಗ್ಲಾಸ್ ನೀರು ಹಿಡಿಯುತ್ತದೆ?



ನಾನು ಅಂದಾಜಿಸಿದ್ದು ☐

ಅಳತೆ ಮಾಡಿ ಕಂಡುಕೊಂಡದು ☐

## ಕುಡಿಯುವ ನೀರು

ನೀವು ಒಂದು ದಿನ ಎಷ್ಟು ಗ್ಲಾಸ್ ನೀರು ಕುಡಿಯುತ್ತೀರಿ? ☐

*ಮಕ್ಕಳು ಒಂದು ದಿನಕ್ಕೆ 12 ಗ್ಲಾಸ್ ನೀರು ಕುಡಿಯಬೇಕು. ಹಿರಿಯರು 18 ಗ್ಲಾಸ್.*

*ಅಪ್ಪನಿಗೂ ಅಮ್ಮನಿಗೂ 18 ಗ್ಲಾಸಿನಂತೆ. ನನಗೂ ಅಣ್ಣನಿಗೂ 12 ಗ್ಲಾಸಿನಂತೆ.*



ರೇಖಾಳ ಮನೆಯಲ್ಲಿ ಅಪ್ಪ, ಅಮ್ಮ ಮತ್ತು ಅಣ್ಣ ಇದ್ದಾರೆ. ಎಲ್ಲರಿಗೂ ಸೇರಿ ಒಂದು ದಿನ ಕುಡಿಯಲು ಎಷ್ಟು ಗ್ಲಾಸು ನೀರು ಬೇಕು? ☐

ಬೇರೆ ಯಾವ ಯಾವ ಅಗತ್ಯಗಳಿಗೆ ನಾವು ನೀರನ್ನು ಬಳಸುತ್ತೇವೆ?

- ಸ್ನಾನಕ್ಕೆ
- ಆಹಾರ ತಯಾರಿಗೆ
- ಹೂದೋಟಕ್ಕೆ
- ಕೃಷಿಗೆ
- 
- 

## ನನ್ನ ಮನೆಯಲ್ಲಿ

ನಿಮ್ಮ ಮನೆಯಲ್ಲಿ ಪ್ರತಿಯೊಂದು ಅವಶ್ಯಕತೆಗಳಿಗೆ ಒಂದು ದಿನ ಎಷ್ಟು ನೀರನ್ನು ಬಳಸುತ್ತಾರೆ? ಕಂಡುಹಿಡಿಯಿರಿ.

| ನೀರಿನ ಅಗತ್ಯ | ಅಳತೆ (ಬಾಲ್ದಿಯಲ್ಲಿ) |
|---|---|
| | |
| | |
| | |
| ಒಟ್ಟು | |



- ಪ್ರತಿಯೊಂದಕ್ಕೂ ಬಳಸುವ ನೀರಿನ ಅಳತೆ ಒಂದೇ ರೀತಿಯಾಗಿರುತ್ತದೆಯೇ?
- ನೀವು ಕಂಡುಕೊಂಡದ್ದು ಮತ್ತು ನಿಮ್ಮ ಗೆಳೆಯ/ಗೆಳತಿ ಕಂಡುಕೊಂಡಿರುವುದನ್ನು ಹೋಲಿಸಿ ನೋಡಿರಿ.
- ಹೆಚ್ಚು ನೀರು ಉಪಯೋಗಿಸಿರುವುದು ಯಾರ ಮನೆಯಲ್ಲಿ?





## ನೀರಿನ ಉಪಯೋಗ

ಕಳೆದ ಎರಡು ದಿನಗಳಲ್ಲಿ ಆಯಿಷಾ ಮತ್ತು ರಾಗಿಣಿಯ ಮನೆಯಲ್ಲಿ ಉಪಯೋಗಿಸುವ ನೀರಿನ ಅಳತೆಯನ್ನು ನೋಡಿರಿ.

- ಆಯಿಷಾ ಮನೆಯ ಅಗತ್ಯಕ್ಕೆ 46 ಕೊಡ ನೀರನ್ನು ತರಕಾರಿ ತೋಟಕ್ಕೆ 36 ಕೊಡ ನೀರನ್ನೂ ಉಪಯೋಗಿಸಿದಳು.
- ರಾಗಿಣಿ ಮನೆಯ ಅಗತ್ಯಕ್ಕೆ 33 ಕೊಡ ನೀರನ್ನು ತರಕಾರಿ ತೋಟಕ್ಕೆ 58 ಕೊಡ ನೀರನ್ನೂ ಉಪಯೋಗಿಸಿದಳು.
- ಪ್ರತಿಯೊಬ್ಬರೂ ಒಟ್ಟು ಎಷ್ಟೆಷ್ಟು ಕೊಡ ನೀರನ್ನು ಉಪಯೋಗಿಸಿದರು?

ಆಯಿಷಾ ☐

ರಾಗಿಣಿ ☐

## ನೀರಿನ ಬೆಲೆ

ರೇಖಾ ಅಪ್ಪನ ಜತೆಗೆ ಪ್ರಯಾಣ ಹೊರಟಳು.




KT 711-3/Maths-2(K) (Vol-II)

ರೇಖಾಳ ಅಪ್ಪ 2 ಬಾಟ್ಲಿ ನೀರು ಖರೀದಿಸಿದರು.

ಅಂಗಡಿಯವನಿಗೆ 100 ರೂಪಾಯಿ ನೋಟು ನೀಡಿದರು.



ಹಾಗಾದರೆ ಬಾಕಿ ಸಿಕ್ಕಿದ ಹಣ ಎಷ್ಟು? ☐

ಅಪ್ಪ ರೇಖಾಳಿಗೆ 32 ರೂಪಾಯಿ ನೀಡಿದರು.

ಮೂರು 10 ರೂಪಾಯಿ ನೋಟುಗಳು, ಎರಡು ಒಂದು ರೂಪಾಯಿ ನಾಣ್ಯಗಳು.

ಅವಳು 13 ರೂಪಾಯಿಯ ತಿಂಡಿ ತೆಗೆದುಕೊಂಡಳು. ರೇಖಾಳ ಕೈಯಲ್ಲಿ ಎಷ್ಟು ರೂಪಾಯಿ ಬಾಕಿ ಉಳಿಯಿತು?

ರೇಖಾಳಿಗೆ ಅಪ್ಪ ಕೊಟ್ಟ ಹಣ ☐

ಅಂಗಡಿಯವನಿಗೆ ಕೊಡಬೇಕಾದ ಹಣ ☐




13 ರೂಪಾಯಿ ಹೇಗೆ ಕೊಡಬಹುದು?

ಒಂದು ಹತ್ತು ರೂಪಾಯಿ ನೋಟು 3 ಒಂದುರೂಪಾಯಿ ನಾಣ್ಯವನ್ನೂ ಕೊಡಬೇಕು.

ಹೇಗೆ ನೀಡಬಹುದು?



ರೇಖಾಳ ಕೈಯಲ್ಲಿರುವ ಹಣ :



20 + 12

ಅಂಗಡಿಯಲ್ಲಿ ನೀಡಬೇಕಾದ ಹಣ



10 + 3

ಬಾಕಿ



$$\begin{array}{r} 20 + 12 - \\ 10 + 3 \\ \hline 10 + 9 \\ \hline \hline \end{array}$$

ಇನ್ನು ಸಂಖ್ಯೆಗಳನ್ನು ಮಾತ್ರ ಉಪಯೋಗಿಸಿ ಬರೆಯುವ

| ಹತ್ತು | ಒಂದು |
|---|---|
| 3 | 2 – |
| 1 | 3 |
| | |

→

| ಹತ್ತು | ಒಂದು |
|---|---|
| 2 | 12 – |
| 1 | 3 |
| 1 | 9 |

## ಬಾಟ್ಲಿ ನೀರು



ಮಲ್ಲೇಶನ ಅಂಗಡಿಯಲ್ಲಿ ಸೋಮವಾರ 100 ಬಾಟ್ಲಿ ನೀರು ಮಾರಾಟಕ್ಕೆ ತಂದರು.

ಆ ವಾರದ ಪ್ರತಿಯೊಂದು ದಿನದ ವ್ಯಾಪಾರದ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ. ಪಟ್ಟಿಯನ್ನು ಗಮನಿಸಿರಿ. ಬಿಟ್ಟು ಹೋದ ಭಾಗವನ್ನು ಪೂರ್ತಿಗೊಳಿಸಿರಿ.

| ದಿನಗಳು | ನೀರಿನ ಬಾಟ್ಲಿಯ ಸಂಖ್ಯೆ | ಮಾರಾಟ ಮಾಡಿದ ಬಾಟ್ಲಿಗಳು | ಉಳಿದ ಬಾಟ್ಲಿಗಳು |
|---|---|---|---|
| ಸೋಮ | 100 | 10 | 90 |
| ಮಂಗಳ | 90 | 14 | |
| ಬುಧ | | 17 | |
| ಗುರು | 59 | 43 | |
| ಶುಕ್ರ | | 9 | |
| ಶನಿ | 34 | 18 | |

ಮಂಗಳವಾರ ಉಳಿದ ನೀರಿನ ಬಾಟ್ಲಿಗಳು 90 – 14 ಆಗಿದೆಯಲ್ಲವೇ? ಹೇಗೆ ಕಳೆಯಬಹುದು?

90ನ್ನು 80 + 10 ಎಂದೂ

14 ನ್ನು 10 + 4 ಎಂದೂ

ಬರೆದು ಕಳೆಯಬಹುದು.


$$\begin{array}{r} 80 + 10 - \\ 10 + 4 \\ \hline 70 + 6 \end{array}$$

| ಹತ್ತುಗಳು | ಒಂದುಗಳು |
|---|---|
| 8 | 10 – |
| 1 | 4 |
| 7 | 6 |


$$\begin{array}{r} 90 - \\ 14 \\ \hline 76 \end{array}$$

- ಶನಿವಾರ ಮಾರಿದ ಬಳಿಕ ಎಷ್ಟು ನೀರಿನ ಬಾಟ್ಲಿಗಳು ಉಳಿದಿವೆ? [ ]

# ಮಳೆ ಕ್ಯಾಲೆಂಡರ್




ರೇಖಾ ಜೂನ್‌ನಲ್ಲಿ ತಯಾರಿಸಿದ ಮಳೆ ಕ್ಯಾಲೆಂಡರನ್ನು ನೋಡಿರಿ.







ಜೂನ್‌ನಲ್ಲಿ ಒಟ್ಟು ಎಷ್ಟು ದಿನಗಳಿವೆ? [ ]

ಜೂನ್‌ನಲ್ಲಿ ಎಷ್ಟು ದಿನ ಮಳೆ ಸುರಿಯಿತು? [ ]

ಮಳೆ ಸುರಿಯದ ದಿನಗಳು ಎಷ್ಟು? [ ]

ಯಾವುದು ಹೆಚ್ಚು? ಮಳೆ ಸುರಿದ ದಿನಗಳೋ? ಸುರಿಯದ ದಿನಗಳೋ? [ ]

## ಕ್ಯಾಲೆಂಡರ್ ನೋಡಿ ಕಂಡುಹಿಡಿಯುವ

ಪ್ರತಿಯೊಂದು ತಿಂಗಳಲ್ಲಿ ಎಷ್ಟೆಷ್ಟು ದಿನಗಳಿವೆ?

| ತಿಂಗಳು | ದಿನಗಳು |
|---|---|
| ಜನವರಿ | 31 |
| ಫೆಬ್ರವರಿ | |
| ಮಾರ್ಚ್ | |
| ಎಪ್ರಿಲ್ | |
| ಮೇ | |
| ಜೂನ್ | |
| ಜುಲೈ | |
| ಅಗೋಸ್ತ್ | |
| ಸೆಪ್ಟಂಬರ್ | |
| ಅಕ್ಟೋಬರ್ | |
| ನವೆಂಬರ್ | |
| ಡಿಸೆಂಬರ್ | |

ಒಟ್ಟು ಎಷ್ಟು ತಿಂಗಳುಗಳು ಇವೆ? ☐

## ಕ್ಯಾಲೆಂಡರ್ ಲೆಕ್ಕ

**2016 ಜನವರಿ**

| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

**2016 ಫೆಬ್ರವರಿ**

| SUN ಆದಿತ್ಯ | MON ಸೋಮ | TUE ಮಂಗಳ | WED ಬುಧ | THU ಗುರು | FRI ಶುಕ್ರ | SAT ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | | | | | |

| | |
|---|---|
| 3 | 4 |
| 10 | 11 |

3 + 11 = ☐

10 + 4 = ☐

ಇದೇ ರೀತಿ ಹತ್ತಿರ ಹತ್ತಿರದ ನಾಲ್ಕು ಕೋಣೆಗಳನ್ನು ಗುರುತಿಸಿರಿ. ಮೂಲೆಯಿಂದ ಮೂಲೆಗೆ ಬರುವ ಸಂಖ್ಯೆಗಳನ್ನು ಕೂಡಿಸಿರಿ. ವಿಶೇಷತೆ ಏನು?

## ಬೇಸಗೆ ಕಾಲ

ರೇಖಾಳ ಊರಿನ ಬಾವಿ ಮತ್ತು ತೋಡುಗಳು ಬತ್ತ ತೊಡಗಿದುವು. ಕುಡಿಯುವ ನೀರಿನ ಟ್ಯಾಂಕರ್ ಲಾರಿ ಬಂದಿತು. ನೀರನ್ನು ತೆಗೆದುಕೊಳ್ಳಲು ಜನರ ಉದ್ದದ ಸಾಲು. ಒಟ್ಟು 45 ಜನರಿದ್ದರು. ರೇಖಾಳ ಅಮ್ಮ 27ನೆಯವರು. ಅವರಿಗೆ ನೀರು ಕೊಟ್ಟಾಗ ಟ್ಯಾಂಕರ್‌ನಲ್ಲಿ ನೀರು ಮುಗಿಯಿತು. ಹಾಗಾದರೆ ನೀರು ಸಿಗದವರು ಎಷ್ಟು ಮಂದಿ?



## ಮಾಡಿ ನೋಡುವ

- ಮನುವಿನಲ್ಲಿರುವ 35 ರೂಪಾಯಿಯಿಂದ 19 ರೂಪಾಯಿಗೆ ಪೆನ್ನು ಮತ್ತು ಪೆನ್ಸಿಲನ್ನು ತೆಗೆದುಕೊಂಡನು. ಹಾಗಾದರೆ ಅವನಲ್ಲಿ ಬಾಕಿ ಉಳಿದ ಹಣ ಎಷ್ಟು?
- ಕಿರಣ 13 ರೂಪಾಯಿಯ ನೋಟು ಪುಸ್ತಕ ಮತ್ತು 47 ರೂಪಾಯಿಯ ಕಂಪಾಸು ಪೆಟ್ಟಿಗೆಯನ್ನು ಕೊಂಡುಕೊಂಡನು. ಎರಡೂ ಸೇರಿ ಒಟ್ಟು ಎಷ್ಟು ರೂಪಾಯಿ?
- ದಾಳದ ಆಟದಲ್ಲಿ ಸಿಸಿಲಿಗೆ 72 ಅಂಕಗಳು. ರಾಗಿಣಿಗೆ 54 ಅಂಕಗಳು ದೊರೆತವು. ಸಿಸಿಲಿಗೆ ರಾಗಿಣಿಗಿಂತ ಎಷ್ಟು ಹೆಚ್ಚು ಅಂಕ ದೊರೆತವು?
- ಆದಿರಳ ಕೈಯಲ್ಲಿ 43 ನೆಲ್ಲಿಕಾಯಿಗಳಿದ್ದವು. ಅದರಲ್ಲಿ 18ನ್ನು ರಾಣಿಗೂ 17ನ್ನು ಡೇವಿಡ್‌ಗೂ ಕೊಟ್ಟಳು. ಆದಿರಳ ಕೈಯಲ್ಲಿ ಬಾಕಿ ಉಳಿದ ನೆಲ್ಲಿಕಾಯಿಗಳೆಷ್ಟು?
- ಹರ್ಷ ಅಂಗಡಿಯಿಂದ 38 ರೂಪಾಯಿಯ ಬಾಳೆಹಣ್ಣು ಮತ್ತು 14 ರೂಪಾಯಿಯ ಬಿಸ್ಕೆಟ್ ಕೊಂಡುಕೊಂಡನು. 60 ರೂಪಾಯಿಯನ್ನು ಅಂಗಡಿಯವನಿಗೆ ಕೊಟ್ಟನು. ಹರ್ಷನಿಗೆ ಬಾಕಿ ಎಷ್ಟು ಹಣ ಸಿಗಬೇಕು?

## ನಮೂನೆ ಪೂರ್ತಿಗೊಳಿಸುವ

- 83, 73, 63, __, __, __
- 52, 54, 56, __, __, __
- 45, 50, 55, __, __, __

ಇದೇ ರೀತಿ ಸ್ವತಃ ನಮೂನೆಗಳನ್ನು ತಯಾರಿಸಿರಿ.

- 

## ಅಡಗಿರುವವರು ಯಾರು?


ಕೆಳಗೆ ಕೊಟ್ಟಿರುವ ಕ್ರಿಯೆಗಳನ್ನು ಮಾಡಿರಿ.

ಉತ್ತರವಾಗಿ ಬರುವ ಸಂಖ್ಯೆಗಳನ್ನು ಚಿತ್ರದಲ್ಲಿ ಕಂಡುಹಿಡಿದು ಬಣ್ಣ ಹಚ್ಚಿರಿ. ಅಡಗಿರುವವನ್ನು ಕಂಡುಹಿಡಿಯಿರಿ.

| | |
|---|---|
| 32 + 54 | = |
| 99 - 12 | = |
| 23 + 12 + 34 | = |
| 20 + 10 + 50 | = |
| 13 + 5 + 41 | = |

| | |
|---|---|
| 62 - 19 | = |
| 94 - 28 | = |
| 25 + 45 | = |
| 12 + 66 | = |
| 89 - 31 | = |

| | |
|---|---|
| 15 + 21 + 9 | = |
| 70 - 22 | = |
| 26 + 56 | = |
| 37 + 47 | = |
| 34 + 64 | = |



7

# ಹಾಯ್ ಎಂಥಾ ರುಚಿ!



ನಾಳೆ ಮೀನಕ್ಕ ಮನೆಗೆ ಬರುತ್ತಾಳೆ
ಒಳ್ಳೆಯ ಔತಣ ತಯಾರಿಸಬೇಕು.
ಹಲವು ವಿಧದ ಪದಾರ್ಥಗಳು ಬೇಕು. ಪಾಯಸ ಮಾಡಬೇಕು.
ಪದಾರ್ಥಕ್ಕೆ ನಮ್ಮ ತೋಟದಿಂದ ಲಭಿಸಿದ ಈ ತರಕಾರಿಗಳು ಸಾಕು.
ಹೌದು, ಕೀಟನಾಶಕ ಹಾಕದ ತರಕಾರಿಗಳು.....

## ಔತಣ ತಯಾರಿಸುವ

ಅರುಣ ಮತ್ತು ಅಂಜಲಿ ತೋಟದಿಂದ ಸಂಗ್ರಹಿಸಿದ ತರಕಾರಿಗಳನ್ನು ನೋಡಿದಿರಲ್ಲವೇ ತಂದೆ, ತಾಯಿ ಅರುಣನನ್ನು ಕರೆದುಕೊಂಡು ತೋಟಕ್ಕೆ ಹೋದರು. ಅವರು ತೋಟದಿಂದ ತರಕಾರಿಗಳನ್ನು ತರುವುದನ್ನು ನೋಡಿರಿ.





ಚಿತ್ರದಲ್ಲಿ ಕೊಟ್ಟಿರುವ ಸಾಮಾಗ್ರಿಗಳಲ್ಲಿ ಅತೀ ಹೆಚ್ಚು ಭಾರ ಇರುವ ವಸ್ತು ಯಾವುದು?

ಅತಿ ಕಡಿಮೆ ಭಾರವಿರುವುದು ಯಾವುದು?



## ಚೀಲದಲ್ಲಿರುವ ವಸ್ತುಗಳು

ಅರುಣನ ಚೀಲದಲ್ಲಿರುವ ವಸ್ತುಗಳು ಚಿತ್ರದಲ್ಲಿವೆ. ಇವುಗಳನ್ನು ಹೆಚ್ಚು ಭಾರದಿಂದ ಕಡಿಮೆ ಭಾರಕ್ಕೆ ಎಂಬ ಕ್ರಮದಲ್ಲಿ ಬರೆಯಿರಿ.



ನಿಮ್ಮ ಚೀಲದಲ್ಲಿರುವ ಸಾಮಾಗ್ರಿಗಳ ಭಾರವನ್ನು ಹೆಚ್ಚು ಭಾರದಿಂದ ಕಡಿಮೆಗೆ ಎಂಬ ಕ್ರಮದಲ್ಲಿ ಬರೆಯಿರಿ.

## ಭಾರ ನೋಡುವ

ನಿಮ್ಮ ಮನೆಯಲ್ಲಿ ಯಾವೆಲ್ಲಾ ಗೃಹೋಪಕರಣಗಳಿವೆ. ನಾಲ್ಕು ವಸ್ತುಗಳ ಹೆಸರು ಬರೆಯಿರಿ.

ಇವುಗಳ ಭಾರ ಸಮಾನವಾಗಿದೆಯೇ?

ಇವುಗಳನ್ನು ಭಾರಕ್ಕೆ ಅನುಸಾರವಾಗಿ ಕ್ರಮೀಕರಿಸಿ ಬರೆಯಿರಿ.


## ಊಹಿಸುವ, ಕಂಡುಹಿಡಿಯುವ

ಅಧ್ಯಾಪಿಕೆ ಮೇಜಿನ ಮೇಲೆ ಇರಿಸಿದ ವಸ್ತುಗಳನ್ನು ನೋಡಿದಿರಲ್ಲವೇ? ಅವುಗಳನ್ನು ಭಾರ ಕಡಿಮೆ ಇರುವುದರಿಂದ ಭಾರ ಹೆಚ್ಚು ಎಂಬ ಕ್ರಮದಲ್ಲಿ ಬರೆಯಿರಿ.

ನನ್ನ ಊಹೆ

ಇದು ಸರಿಯಾಗಿದೆಯೋ ಎಂದು ಹೇಗೆ ಕಂಡುಹಿಡಿಯಬಹುದು?

- 
- 



ಈ ವಸ್ತುಗಳಲ್ಲಿ ಒಂದೊಂದನ್ನು ತೆಗೆದು ನೋಡಿ ಭಾರಕ್ಕೆ ಅನುಸಾರವಾಗಿ ಕ್ರಮದಲ್ಲಿ ಬರೆಯಿರಿ.

## ಅಂಗಡಿಗೆ

ಔತಣವನ್ನು ತಯಾರಿಸಲು ಇನ್ನೂ ಕೆಲವು ಸಾಮಗ್ರಿಗಳು ಬೇಕು. ಅರುಣ ಮತ್ತು ತಂದೆ ಅಂಗಡಿಗೆ ತಲುಪಿದರು.




**ಬೆಲೆ ವಿವರ ಪಟ್ಟಿ ಬೆಲೆ**

| ಸಾಮಗ್ರಿ | ಬೆಲೆ (ಕಿಲೋಗ್ರಾಂ) |
|---|---|
| ಅಕ್ಕಿ | 35 ರೂಪಾಯಿ |
| ಹೆಸರು | 55 ರೂಪಾಯಿ |
| ಮೆಣಸು | 75 ರೂಪಾಯಿ |
| ನೀರುಳ್ಳಿ | 34 ರೂಪಾಯಿ |
| ಉಪ್ಪು | 10 ರೂಪಾಯಿ |
| ಸೇಮಿಗೆ | 35 ರೂಪಾಯಿ |
| ಸಕ್ಕರೆ | 31 ರೂಪಾಯಿ |
| ಬೇಳೆ | 60 ರೂಪಾಯಿ |

ಅರುಣ ಮತ್ತು ತಂದೆ ಖರೀದಿಸಿದ ವಸ್ತುಗಳು ಯಾವುದೆಲ್ಲಾ?

ಖರೀದಿಸಿದ ವಸ್ತುಗಳ ಬೆಲೆ ಎಷ್ಟಾಗಿರಬಹುದು?

| | | |
|---|---|---|
| ಅಕ್ಕಿ | 2 ಕಿಲೋ ಗ್ರಾಂ | |
| ಸಕ್ಕರೆ | 1 ಕಿಲೋ ಗ್ರಾಂ | |
| ನೀರುಳ್ಳಿ | 1 ಕಿಲೋ ಗ್ರಾಂ | |
| ಒಟ್ಟು ಬೆಲೆ | | |



ಅರುಣನ ತಂದೆ ಅಂಗಡಿಯವನಿಗೆ

ಕೊಟ್ಟ ನೋಟು ಚಿತ್ರದಲ್ಲಿವೆ.

ಎಷ್ಟು ರೂಪಾಯಿ ಕೊಟ್ಟರು?

ಬಾಕಿ ಇರಬಹುದೇ? ಎಷ್ಟು ರೂಪಾಯಿ?

## ಚಿಲ್ಲರೆ ಮಾಡುವ

ಇನ್ನೂ ಸಾಮಗ್ರಿಗಳನ್ನು ಖರೀದಿಸಬೇಕಾಗಿದೆ. 100 ರೂಪಾಯಿಯ ಚಿಲ್ಲರೆ ಬೇಕು. 100 ರೂಪಾಯಿಯ ಚಿಲ್ಲರೆಗೆ ಯಾವ ಯಾವ ನೋಟುಗಳು? ಎಷ್ಟೆಷ್ಟು?





ನಾನು ಕಂಡುಕೊಂಡ ರೀತಿ



## ರಾಗಿಣಿ ಖರೀದಿಸಿದ್ದು

ಅಷ್ಟರಲ್ಲಿ ಗೆಳತಿ ರಾಗಿಣಿ ಸಾಮಾಗ್ರಿಗಳನ್ನು ಖರೀದಿಸಲು ಬಂದಳು. 1 ಕಿಲೋ ಗ್ರಾಂ ಮೆಣಸು 1 ಕಿಲೋ ಗ್ರಾಂ ನೀರುಳ್ಳಿ ರಾಗಿಣಿ ಖರೀದಿಸಿದಳು. ರಾಗಿಣಿ ಎಷ್ಟು ರೂಪಾಯಿ ನೀಡಬೇಕು?

ಯಾವೆಲ್ಲಾ ನೋಟುಗಳು/ ನಾಣ್ಯಗಳು ಇದರ ಬೆಲೆಯಾಗಿ ನೀಡಬೇಕು?



ಒಂದು ರೀತಿ

ಇನ್ನೊಂದು ರೀತಿ

## ಮೀನಕ್ಕ ಬಂದಾಗ

ಮೂರನೆಯ ದಿನ ಬೆಳಗ್ಗೆ ಮೀನಕ್ಕ ಬಂದಳು. ಅರುಣ ಮತ್ತು ಅಂಜಲಿಗೆ ಉಡುಗೊರೆಗಳನ್ನು ನೀಡಿದಳು. ಸಂತೋಷದಿಂದ ಉಡುಗೊರೆಗಳ ಪೊಟ್ಟಣವನ್ನು ತೆರೆದರು. ಹಾಯ್ ಆಟಿಕೆಗಳು. ಮೀನಕ್ಕಈ ಬೊಂಬೆಗೆ ಎಷ್ಟು ರೂಪಾಯಿ?

"ನೀವು ರಶೀದಿ ನೋಡಿ ಬೆಲೆ ಕಂಡುಹಿಡಿಯಿರಿ" ಮೀನಕ್ಕ ಹೇಳಿದಳು.

ರಶೀದಿ ಹರಿದು ಹೋಗಿತ್ತು

ಬೊಂಬೆಯ ಬೆಲೆ ಎಷ್ಟು? ಕಂಡುಹಿಡಿಯಿರಿ.

**ಬಿಲ್ಲ್**

| ವಸ್ತು | ಬೆಲೆ |
|---|---|
| ಬೊಂಬೆ | |
| ಚೆಂಡು | 28 |
| ಕಾರು | 25 |
| ಒಟ್ಟು | **72** |

ಮಧ್ಯಾಹ್ನ ಅರುಣ ಮತ್ತು ಅಂಜಲಿ ಮೀನಕ್ಕನ ಜೊತೆ ಕುಳಿತು ಊಟ ಮಾಡಿದರು. ಔತಣ ಉತ್ತಮವಾಗಿದೆ. ಪದಾರ್ಥಗಳು ರುಚಿಯಾಗಿವೆ, ಮೀನು ಹೇಳಿದಳು.

## ಸಂಖ್ಯೆಗಳ ರಹಸ್ಯ

ಸಮೀಪದ 2 ಎರಡಂಕೆ ಸಂಖ್ಯೆಗಳನ್ನು ಬರೆಯಿರಿ (ಉದಾ : 35, 36) ಪ್ರತಿಯೊಂದು ಸಂಖ್ಯೆಯ ಅಂಕೆಗಳ ಸ್ಥಾನ ಬದಲಿಸಿ ಬರೆಯಿರಿ.

(ಉದಾ : 53, 63) ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆಯಿರಿ..


63 - 53 = ☐


ಇದೇ ರೀತಿ ಸಂಖ್ಯೆಗಳನ್ನು ಬರೆದು ಪರಿಶೋಧಿಸಿರಿ.

ಏನು ಕಂಡುಹಿಡಿದಿರಿ. ☐

## ಪೂರ್ತಿಗೊಳಿಸುವ


ಪ್ರತಿಯೊಂದರಲ್ಲಿಯೂ ನೀವು ಕಂಡುಹಿಡಿದ ವಿಶೇಷತೆಗಳು ಯಾವುವು?




## ಕಂಡುಹಿಡಿದು ಬರೆಯುವ

ಪ್ರತಿಯೊಂದು ಬದಿಯ ಮೂರು ಸಂಖ್ಯೆಗಳನ್ನು ಕೂಡಿಸಿದರೆ 9 ಲಭಿಸಬೇಕು ಬಿಟ್ಟು ಹೋದ ಸಂಖ್ಯೆಗಳನ್ನು ಬರೆದು ಪೂರ್ತಿಗೊಳಿಸಿರಿ.





## ಮಾಡಿ ನೋಡುವಾ

### ಸಂಖ್ಯಾ ಚೌಕ ಪೂರ್ತಿಗೊಳಿಸುವ

| + | 30 | 35 | 40 | 45 | 50 |
|---|---|---|---|---|---|
| 55 | 85 | | | 100 | |
| 60 | | 95 | 100 | | |
| 65 | | 100 | 105 | | |
| 70 | 100 | | | 115 | |
| 75 | | | | | 125 |

### ಹಣ್ಣಿನ ಅಂಗಡಿಯಲ್ಲಿ

- ಅರುಣ 80 ರೂಪಾಯಿಗೆ ಒಂದು ಕಿಲೋ ಗ್ರಾಂ ಸೇಬು 50 ರೂಪಾಯಿಗೆ ಒಂದು ಕಿಲೋ ಗ್ರಾಂ ಕಿತ್ತಳೆ ಖರೀದಿಸಿದನು. ಒಟ್ಟು ಎಷ್ಟು ರೂಪಾಯಿ ಕೊಡಬೇಕು.

### ಬಾಕಿ ಎಷ್ಟು?

- ಗಿರೀಶ್ ಬೇಕರಿಯಿಂದ 95 ರೂಪಾಯಿ ಬೆಲೆಯ ಎರಡು ಕೇಕುಗಳನ್ನು ಖರೀದಿಸಿದನು. ಕೇಕಿಗೆ ಒಟ್ಟು ಎಷ್ಟು ರೂಪಾಯಿ ಆಗಬಹುದು? ಗಿರೀಶ್ 2 ನೂರು ರೂಪಾಯಿ ನೋಟುಗಳನ್ನು ನೀಡಿದನು. ಬಾಕಿ ಎಷ್ಟು ರೂಪಾಯಿ ಸಿಗಬಹುದು?
- ರೇವತಿ ಮತ್ತು ತಂದೆ ಚಹಾ ಮತ್ತು ವಡೆ ತಿಂದರು 28 ರೂಪಾಯಿ ಆಯಿತು. 50 ರೂಪಾಯಿ ಕೊಟ್ಟರು. ಅಂಗಡಿಯಿಂದ ಎಷ್ಟು ರೂಪಾಯಿ ಬಾಕಿ ಸಿಗಬಹುದು?

## ಗೊನೆಯಲ್ಲಿ ಕಾಯಿಗಳು

ರೀನಳ ತಂದೆ ತೋಟದಿಂದ ತಂದ ಗೊನೆಯಲ್ಲಿ ಎಷ್ಟು ಕಾಯಿಗಳಿವೆ? ರೀನ ಎಣಿಸಿ ನೋಡಿದಳು. 10 ರಂತೆ ಇರುವ 9 ಪಾಡಗಳೂ 6 ಇರುವ ಒಂದು ಪಾಡವೂ ಇದ್ದವು. ಗೊನೆಯಲ್ಲಿ ಒಟ್ಟು ಎಷ್ಟು ಕಾಯಿಗಳಿವೆ? ಅದರಿಂದ 26 ಕಾಯಿಗಳನ್ನು ಪದಾರ್ಥ ಮಾಡಲು ಉಪಯೋಗಿಸಿದರು. ಉಳಿದವುಗಳನ್ನು ಹಣ್ಣಾಗಲು ಇರಿಸಿದರು. ಹಾಗಾದರೆ ಹಣ್ಣಾಗಲು ಇರಿಸಿದ ಕಾಯಿಗಳೆಷ್ಟು?

## ಬೆಲೆ ಕಂಡುಹಿಡಿಯುವ

ಡೇವಿಡ್ ಮತ್ತು ರಹೀಂ ಕೆಲವು ಸಾಮಾಗ್ರಿಗಳನ್ನು ಖರೀದಿಸಿದರು.

### ಡೇವಿಡ್ ಖರೀದಿಸಿದ ಸಾಮಾಗ್ರಿಗಳು

| | | |
|---|---|---|
| ಸಕ್ಕರೆ | 1 ಕಿಲೋ ಗ್ರಾಂ | |
| ಅಕ್ಕಿ | 1 ಕಿಲೋ ಗ್ರಾಂ | 33 ರೂ. |
| ಆಟ್ಟಾ | 1 ಕಿಲೋ ಗ್ರಾಂ | 35 ರೂ. |
| | ಒಟ್ಟು | 99 ರೂ. |

### ರಹೀಂ ಖರೀದಿಸಿದ ಸಾಮಾಗ್ರಿಗಳು

| | | |
|---|---|---|
| ಬಾಳೆ ಹಣ್ಣು | 1 ಕಿಲೋ ಗ್ರಾಂ | 27 ರೂ. |
| ಆಟ್ಟಾ | 1 ಪ್ಯಾಕೆಟ್ | 35 ರೂ. |
| ಸಕ್ಕರೆ | 1 ಕಿಲೋ ಗ್ರಾಂ | |
| | ಒಟ್ಟು | ರೂ. |

ಸಕ್ಕರೆಯ ಬೆಲೆ ಎಷ್ಟು?


ಸಾಮಗ್ರಿಗಳಿಗೆ ಹೆಚ್ಚು ಹಣ ಕೊಡಬೇಕಾದ್ದು ಯಾರು? ಎಷ್ಟು ಹೆಚ್ಚು?

8

# ಒಂದು ಪ್ರವಾಸ ವಿಚಾರ ಹಲವು

ಗೆಳೆಯರಾದ ಕಿಟ್ಟು ಮತ್ತು ಮಿಟ್ಟು ಕಲಿಕಾ ಪ್ರವಾಸದ ತಯಾರಿಯಲ್ಲಿದ್ದರು. ಮೃಗಾಲಯಕ್ಕೆ ಹೋಗೋಣ ಎಂದು ಮಿಟ್ಟು ಹೇಳಿದನು. ಪಾರ್ಕ್‌ಗೆ ಹೋಗೋಣ ಎಂದು ಕಿಟ್ಟು ತನ್ನ ಆಸೆಯನ್ನು ಹೇಳಿದನು.

"ಅದಕ್ಕೇನಂತೆ ಮೃಗಾಲಯಕ್ಕೂ, ಪಾರ್ಕಿಗೂ ಹೋಗೋಣ" ಪ್ರತಿಯೊಂದು ತರಗತಿಯವರು 10 ಮಂದಿಯಂತೆ ಗುಂಪುಗಳಾಗಬೇಕು. ಪ್ರತಿಯೊಂದು ಗುಂಪಿಗೂ ಒಬ್ಬ ಮುಖಂಡನಿರಬೇಕು" ಟೀಚರು ಹೇಳಿದರು. ಮೂರನೇ ತರಗತಿಯವರು 10 ಮಂದಿಯ 3 ಗುಂಪುಗಳಾದರು.



ಕಲಿಕಾ ಪ್ರವಾಸದಲ್ಲಿ ಮೂರನೇ ತರಗತಿಯಿಂದ ಒಟ್ಟು ಎಷ್ಟು ಮಂದಿ ಭಾಗವಹಿಸಿದರು?




10 + 10 + 10 + = 30

ನಾಲ್ಕನೇ ತರಗತಿಯವರು 10 ಮಂದಿಯಂತೆ 5 ಗುಂಪುಗಳಾದರು. ಹಾಗಾದರೆ ನಾಲ್ಕನೇ ತರಗತಿಯಿಂದ ಭಾಗವಹಿಸುವವರು ಎಷ್ಟು ಮಂದಿ? 10 ಮಂದಿಯ 5 ಗುಂಪುಗಳು 10ನ್ನು 5 ಸಲ ಕೂಡಿಸಬೇಕು.

10 + 10 + 10 +10 + 10 = 50

ಒಂದನೇ ತರಗತಿಯವರೂ ಎರಡನೇ ತರಗತಿಯವರೂ ಕಲಿಕಾ ಪ್ರವಾಸಕ್ಕೆ ಬರುತ್ತಿದ್ದಾರೆ. ಎರಡು ತರಗತಿಯವರೂ 2 ಗುಂಪುಗಳಾದರು.


ಒಟ್ಟು ಎಷ್ಟು ಗುಂಪುಗಳಿವೆ?

ಮೂರನೇ ತರಗತಿಯಿಂದ 3 ಗುಂಪುಗಳು

ನಾಲ್ಕನೇ ತರಗತಿಯಿಂದ 5 ಗುಂಪುಗಳು

ಒಂದು ಮತ್ತು ಎರಡನೇ ತರಗತಿಯಿಂದ

ಒಟ್ಟು 2 ಗುಂಪುಗಳು



ಒಟ್ಟು10 ಗುಂಪುಗಳು

$10 + 10 + 10 + 10 + 10 + 10 + 10 + 10 + 10 + 10 = 100$

ಇನ್ನು ಕೆಳಗಿನ ಪಟ್ಟಿಯನ್ನು ಪೂರ್ತಿಗೊಳಿಸಿರಿ.

$10 + 10 =$ **20**

$10 + 10 + 10 =$

$10 + 10 + 10 + 10 =$

$10 + 10 + 10 + 10 + 10 =$

............................................... = ..........


........................................................... = ..........

................................................................... = ..........

........................................................................... = ..........


............................................................................................ = **100**

- ಮಿನ್ನುವಿಗೆ ತಂದೆ 4 ಹತ್ತು ರೂಪಾಯಿ ನೋಟುಗಳನ್ನು ಕೊಟ್ಟರು. ಚಿನ್ನುವಿಗೆ ಅವಳ ತಂದೆ 3 ಹತ್ತು ರೂಪಾಯಿ ನೋಟುಗಳನ್ನು ನೀಡಿದರು. ಇಬ್ಬರಿಗೂ ಸೇರಿ ಎಷ್ಟು ರೂಪಾಯಿ ಲಭಿಸಿತು?




## ರೋಮಿ ಟ್ರಾವೆಲ್ಸ್

ರೋಮಿ ಟ್ರಾವೆಲ್ಸ್‌ನ ಬಸ್ಸಿನಲ್ಲಿ ಯಾತ್ರೆ.
9 ಗಂಟೆಗೆ ಬಸ್ಸು ಹೊರಟಿತು.
ಒಂದನೇ ತರಗತಿಯವರು ಬಸ್ಸಿನ ಮುಂದಿನ ಸೀಟುಗಳಲ್ಲಿ ಕುಳಿತಿರುವರು.
ಚಿತ್ರ ನೋಡಿರಿ.




ಒಂದು ಸೀಟಿನಲ್ಲಿರುವ ಮಕ್ಕಳ ಸಂಖ್ಯೆ ☐

ಒಟ್ಟು ಮಕ್ಕಳ ಸಂಖ್ಯೆ = 2 ಮಂದಿ ಇರುವ 6 ಗುಂಪುಗಳು


$2 + 2 + 2 + 2 + 2 + 2 =$ ☐

ಇದರ ಹಿಂದೆ ಎರಡನೇ ತರಗತಿಯವರು 4 ಸೀಟುಗಳಲ್ಲಿ 2 ಮಂದಿಯಂತೆ ಕುಳಿತರು.
ಎರಡನೇ ತರಗತಿಯಿಂದ ಎಷ್ಟು ಮಂದಿ? 2 ಮಂದಿಯಂತೆ 4 ಗುಂಪುಗಳು

$2 + 2 + 2 + 2 = 8$




ಒಂದು ಮತ್ತು ಎರಡನೆಯ ತರಗತಿಯ ಮಕ್ಕಳೆಲ್ಲಾ ಸೇರಿ ಸೀಟೊಂದರಲ್ಲಿ ಎರಡು ಮಂದಿಯಂತೆ 10 ಸೀಟುಗಳಲ್ಲಿ.



10 ಸಲ 2 ಕೂಡಿಸಿದರೆ $2 + 2 + 2 + 2 + 2 + 2 + 2 + 2 + 2 + 2$

10 ಸಲ 2 $= 10 \times 2 = 20$

## ಬೈಕ್ ರ್‍ಯಾಲಿ

ಯಾತ್ರೆಯ ಮಧ್ಯದಲ್ಲಿ ಅವರು ಒಂದು ಬೈಕ್ ರ್‍ಯಾಲಿ ಕಂಡರು.



7 ಬೈಕ್‌ಗಳು ಇವೆ. ಪ್ರತಿಯೊಂದು ಬೈಕ್‌ನಲ್ಲಿ 2 ಮಂದಿ ಇದ್ದಾರೆ.

ಒಟ್ಟು ಎಷ್ಟು ಮಂದಿ ಇದ್ದಾರೆ?

| | |
|---|---|
| ಬೈಕ್‌ಗಳ ಸಂಖ್ಯೆ | ☐ |
| ಪ್ರತಿಯೊಂದು ಬೈಕ್‌ನಲ್ಲಿರುವವರ ಸಂಖ್ಯೆ | ☐ |
| ಒಟ್ಟು ಜನರ ಸಂಖ್ಯೆ | $= 2 + 2 + 2 + 2 + 2 + 2 + 2 =$ ☐ |

7 ಸಲ 2 $= 7 \times 2 =$ ☐

## ಮಾದರಿಯಂತೆ ಬರೆಯುವ

**18**
- $9 \times 2$
- $2 + 2 + 2 + 2 + 2 + 2 + 2 + 2 + 2$
- 9 ಸಲ 2
- 2 ರಂತೆ 9 ಗುಂಪುಗಳು

**10**
- ☐
- $2 + 2 + 2 + 2 + 2$
- ☐
- ☐

**☐**
- $8 \times 2$
- $2 + 2 + 2 + 2 + 2 + 2 + 2 + 2$
- 2 ರಂತೆ ಇರುವ 8 ಗುಂಪು
- 8 ಸಲ 2

**14**
- ☐
- ☐
- 2 ರಂತೆ ಇರುವ 7 ಗುಂಪು
- ☐

## ಮಿಠಾಯಿ ಖರೀದಿಸುವ

ಕಿಟ್ಟು ಮತ್ತು 3 ಮಂದಿ ಗೆಳೆಯರು 2 ಮಿಠಾಯಿಗಳಂತೆ ಖರೀದಿಸಿದರು. 4 ಮಂದಿ ಸೇರಿ ಎಷ್ಟು ಮಿಠಾಯಿ ಖರೀದಿಸಿರಬಹುದು? ಒಂದು ಮಿಠಾಯಿಗೆ 2 ರೂಪಾಯಿ 4 ಜನರು ಸೇರಿ ಎಷ್ಟು ರೂಪಾಯಿಯ ಮಿಠಾಯಿ ಖರೀದಿಸಿರಬಹುದು?

## ಚಹಾ ಅಂಗಡಿಯಲ್ಲಿ

ಗಂಟೆ 11 ಆಯಿತು. ಬಸ್ಸನ್ನು ಒಂದು ಕಡೆಯಲ್ಲಿ ನಿಲ್ಲಿಸಿದರು. "ಇನ್ನು ಚಹಾ ಕುಡಿದು ಯಾತ್ರೆ ಮುಂದುವರಿಸುವ'ಟೀಚರು ಹೇಳಿದರು. ಅವರು ಹೋಟೆಲ್‌ಗೆ ಹೋದರು.

ಒಂದು ಮೇಜಿನ ಸುತ್ತಲೂ 5 ಕುರ್ಚಿಗಳನ್ನು ಇರಿಸಿದ್ದರು. ಇದೇ ರೀತಿ 4 ಮೇಜಿನ ಸುತ್ತಲೂ ಕುರ್ಚಿಗಳನ್ನು ಇಟ್ಟಿದ್ದರು. ಹಾಗಾದರೆ ಎಷ್ಟು ಮಂದಿಗೆ ಕುಳಿತು ಚಹಾ ಕುಡಿಯಬಹುದು?



- ಒಂದು ಮೇಜಿನ ಸುತ್ತಲೂ ಇರುವ ಕುರ್ಚಿಗಳ ಸಂಖ್ಯೆ ☐
- ಎರಡು ಮೇಜುಗಳ ಸುತ್ತಲೂ ಇರುವ ಕುರ್ಚಿಗಳ ಸಂಖ್ಯೆ ☐
- ಮೂರು ಮೇಜುಗಳ ಸುತ್ತಲೂ ಇರುವ ಕುರ್ಚಿಗಳ ಸಂಖ್ಯೆ ☐
- ನಾಲ್ಕು ಮೇಜುಗಳ ಸುತ್ತಲೂ ಇರುವ ಕುರ್ಚಿಗಳ ಸಂಖ್ಯೆ ☐

ಒಳಗೆ 3 ಸಣ್ಣ ಮೇಜಿನ ಸುತ್ತಲೂ 2 ಕುರ್ಚಿಗಳಂತೆ ಇರಿಸಿದ್ದರು. ಅಲ್ಲಿ ಎಷ್ಟು ಮಂದಿಗೆ ಕುಳಿತುಕೊಳ್ಳಬಹುದು? ☐

## ತಿಂಡಿಗಳು ಹಲವು ವಿಧ



**ಬೆಲೆ ವಿವರ ಪಟ್ಟಿ**

| | |
|---|---|
| ಬಿಸ್ಕೆಟ್ | 2 ರೂ |
| ಕೇಕ್ | 2 ರೂ |
| ಚಹಾ | 5 ರೂ |
| ಸಮೋಸ | 5 ರೂ |
| ಪೋಡಿ | 5 ರೂ |
| ವಡೆ | 5 ರೂ |
| ಚಟ್ಟಂಬಡೆ | 10 ರೂ |
| ಎಲೆವಡೆ | 10 ರೂ |

ಅರುಣನ ಗುಂಪಿನ 4 ಮಂದಿ ಕೇಕ್ ಮತ್ತು 6 ಮಂದಿ ಚಟ್ಟಂಬಡೆ ತಿಂದರು. ಒಟ್ಟು ಎಷ್ಟು ರೂಪಾಯಿ?

ಒಂದು ಕೇಕ್‌ನ ಬೆಲೆ 2 ರೂ

4 ಕೇಕ್‌ನ ಬೆಲೆ $= 4 \times 2$ = ☐ ರೂಪಾಯಿ

ಒಂದು ಚಟ್ಟಂಬಡೆಯ ಬೆಲೆ = 10 ರೂಪಾಯಿ

6 ಚಟ್ಟಂಬಡೆಯ ಬೆಲೆ $= 6 \times 10$ = ☐ ರೂಪಾಯಿ

ಒಟ್ಟು ಬೆಲೆ = ☐ + ☐ = ☐ ರೂಪಾಯಿ

ಜಾಫರ್‌ನ ಗುಂಪಿನ 4 ಮಂದಿ ಚಹಾ ಮತ್ತು ಸಮೋಸ ತಿಂದರು. ಒಟ್ಟು ಎಷ್ಟು ರೂಪಾಯಿ ಆಗಬಹುದು?





**ನಾನು ಕಂಡುಹಿಡಿದದ್ದು**

4 ಚಹಾದ ಬೆಲೆ ☐

4 ಸಮೋಸದ ಬೆಲೆ ☐


ಒಟ್ಟು ☐



ಜಾಫರನ ಗುಂಪಿನ ಉಳಿದ 6 ಸದಸ್ಯರು ಬಿಸ್ಕೆಟ್ ಮಾತ್ರ ತಿಂದರು. ಜಾಫರನ ಗುಂಪಿಗೆ ಒಟ್ಟು ಎಷ್ಟು ರೂಪಾಯಿ ಖರ್ಚಾಯಿತು. ಚಹಾ ಕುಡಿದ ಅನಂತರ ಯಾತ್ರೆ ಮುಂದುವರಿಸಿದರು. ಬಸ್ಸು ಮೃಗಾಲಯದ ಬಳಿ ತಲುಪಿತು. ಸಮಯ ಮಧ್ಯಾಹ್ನ 12 ಗಂಟೆ.


## ಮೃಗಾಲಯದಲ್ಲಿ




ಅನಾಮಿಕಗಳ ಗುಂಪಿನ 10 ಮಂದಿಗೆ ಟಿಕೆಟ್‌ಗೆ ಒಟ್ಟು ಎಷ್ಟು ರೂಪಾಯಿ ಆಗಬಹುದು? ☐

ಪ್ರತಿಯೊಂದು ಗುಂಪಿನೊಂದಿಗೆ ಒಬ್ಬ ಅಧ್ಯಾಪಕ ಮತ್ತು ಒಬ್ಬರು ರಕ್ಷಕರೂ ಇದ್ದಾರೆ. ಹಾಗಾದರೆ 10 ಗುಂಪುಗಳ ಜೊತೆಯಲ್ಲಿ ಎಷ್ಟು ಹಿರಿಯರು ಇದ್ದಾರೆ? ☐

## ಜಿಂಕೆಗಳ ಗುಂಪು



5 ಜಿಂಕೆಗಳಿರುವ 3 ಗುಂಪುಗಳು

ಒಟ್ಟು ಎಷ್ಟು ಜಿಂಕೆಗಳು? ☐

## ಗಿಳಿಗಳೆಷ್ಟು?

ಒಂದು ಚಕ್ರದಲ್ಲಿ 2 ಗಿಳಿಗಳಂತೆ ಇದ್ದವು.


ಪ್ರತಿಯೊಂದು ಸಾಲಿನಲ್ಲಿರುವ ಗಿಳಿಗಳ ಸಂಖ್ಯೆ ಎಷ್ಟು?



| ಗಿಳಿಗಳ ಸಂಖ್ಯೆ | ಗುಣಾಕಾರ ರೀತಿ |
|---|---|
|  | |
| 2 | 1 × 2 = 2 |
|  | |
| 2 + 2 = 4 | 2 × 2 = 4 |
|  | |
| 2 + 2 + 2 = 6 | 3 × 2 = 6 |
|  | |
| 2 + 2 + 2 + 2 = | 4 × 2 = |
|  | |
| | |
|  | |
| | |
|  | |
| | |
|  | |
| | |
|  | |
| | |
|  | |
| | |

## ನಾವು ಎಷ್ಟು ಜನ?







| | | |
|---|---|---|
| $2 \times 5$ | ○○○○○ ○○○○○ | |
| $5 \times 2$ | ○○ ○○ ○○ ○○ ○○ | |

ಕ್ರಿಯೆ ಬರೆಯಿರಿ


| | |
|---|---|
| ○○ ○○ ○○ ○○ ○○ ○○ ○○ ○○ ○○ ○○ | |
| ○○○○○○○○○○ ○○○○○○○○○○ ○○○○○○○○○○ | |

ಚಿತ್ರೀಕರಿಸಿ ಮಾಡಿರಿ

| | |
|---|---|
| $8 \times 2$ | |
| $4 \times 5$ | |

## ಪಾರ್ಕಿಗೆ

ಮೃಗಾಲಯ ನೋಡಿದ ಅನಂತರ ಸಂಜೆ 4 ಗಂಟೆಗೆ ಎಲ್ಲರೂ ಪಾರ್ಕಿಗೆ ಹೋದರು.






ಒಂದು ಬೋಗಿಯಲ್ಲಿ 10 ಜನರಂತೆ 5 ಬೋಗಿಯಲ್ಲಿ ಎಷ್ಟು ಮಂದಿ ಇದ್ದಾರೆ?

## ನಕ್ಷತ್ರ ಆಟ

ಮೊದಲು ಒಂದು ದಾಳ ಹಾಕುವುದು. ದಾಳ ಹಾಕಿದಾಗ ಸಿಕ್ಕಿದ ಸಂಖ್ಯೆಯಷ್ಟೇ ಉರುಟು ಎಳೆಯಬೇಕು. ಪ್ರತಿಯೊಂದು ಉರುಟಿನ ಒಳಗೆ 2 ನಕ್ಷತ್ರಗಳನ್ನು ರಚಿಸಬೇಕು. ಒಂದು ಆಟ ಮುಗಿದಾಗ ಅತೀ ಹೆಚ್ಚು ನಕ್ಷತ್ರ ರಚಿಸಿದ ಮಗು ಜಯಗಳಿಸುತ್ತದೆ.

ಈ ಆಟ ನೀವು ಆಡಿರಿ. ನಕ್ಷತ್ರಕ್ಕೆ ವೆಜಿಟೇಬಲ್ ಪ್ರಿಂಟಿಂಗ್ ಮಾಡಬಹುದು. ನಕ್ಷತ್ರಗಳ ಸಂಖ್ಯೆ 2,5,10 ರಂತೆ ಬದಲಿಸಿ ಬರೆಯಿರಿ.

ಮಿನ್ನು ಮತ್ತು ಗೆಳೆಯರು ಆಟ ಆಡಲು ಆರಂಭಿಸಿದರು.



ಪ್ರತಿಯೊಬ್ಬರಿಗೆ ಎಷ್ಟು ನಕ್ಷತ್ರಗಳು ಲಭಿಸಿದವು?

| | | ನಕ್ಷತ್ರಗಳ ಸಂಖ್ಯೆ |
|---|---|---|
| ಮಿನ್ನು | ★★ ★★ | $2 \times 2 = 4$ |
| ಅರುಣ | ★★ ★★ ★★ ★★ ★★ | $5 \times 2 =$ |
| ಅಂಜಲಿ | ★★ ★★ ★★ | |
| ಅನಾಮಿಕ | ★★ | |
| ರಹೀಂ | ★★ ★★ ★★ ★★ | |

ಆಟದಲ್ಲಿ ಗೆದ್ದವರು ಯಾರು? ______

## ನಕ್ಷತ್ರಗಳು

ಬಿಟ್ಟು ಹೋದ ಕೋಣೆಗಳನ್ನು ತುಂಬಿಸಿರಿ.

| | ನಕ್ಷತ್ರಗಳ ಸಂಖ್ಯೆ | ಗುಣಾಕಾರ ರೀತಿ |
|---|---|---|
|  | 5 | $1 \times 5 = 5$ |
|  | $5 + 5 = 10$ | $2 \times 5 = 10$ |
|  | | |
|  | | |

ಇದೇ ರೀತಿ ಒಂದು ಉರುಟಿನೊಳಗೆ 5 ನಕ್ಷತ್ರಗಳಂತೆ 7 ಉರುಟಿನಲ್ಲಿ ಎಷ್ಟು ನಕ್ಷತ್ರಗಳಿರಬಹುದು? [ ]

10 ಉರುಟಿನೊಳಗೆ ಎಷ್ಟು ನಕ್ಷತ್ರಗಳಿರಬಹುದು? [ ]

ಬಳೆ ಉಪಯೋಗಿಸಿ ಉರುಟು ರಚಿಸಿರಿ. ನಕ್ಷತ್ರಗಳಿಗೆ ವೆಜಿಟೆಬಲ್ ಪ್ರಿಂಟಿಂಗ್ ಉಪಯೋಗಿಸಹುದು. ಇದೇ ರೀತಿ ಪಟ್ಟಿ ಪೂರ್ತಿಗೊಳಿಸಿರಿ.

## ಪಟ್ಟಿ ಪೂರ್ತಿಗೊಳಿಸಿರಿ


| 5 ರ ಗುಂಪುಗಳು | ಒಟ್ಟು |
|---|---|
| 5 | $1 \times 5 = 5$ |
| $5 + 5 =$ | $2 \times 5 = 10$ |
| $5 + 5 + 5 =$ | $3 \times 5 = 15$ |
| | |
| | |
| | |
| | |
| | |
| | |
| | |

## ಮಣಿಗಳನ್ನು ಖರೀದಿಸುವ

ಹಿಂದಿರುಗುವುದಕ್ಕಿಂತ ಮೊದಲು ಅವರು ಕೆಲವು ವಸ್ತುಗಳನ್ನು ಖರೀದಿಸಿದರು.

- ಅರುಣ ಸೈಕಲನ್ನು ಅಲಂಕರಿಸಲು ಮಣಿಗಳನ್ನು ಖರೀದಿಸಿದನು. ಒಂದು ಪ್ಯಾಕೆಟ್‌ನಲ್ಲಿ 10 ರಂತೆ ಇರುವ 6 ಪ್ಯಾಕೆಟ್‌ಗಳನ್ನು ಖರೀದಿಸಿದನು. ಅವನಿಗೆ ಎಷ್ಟು ಮಣಿಗಳು ಲಭಿಸಿರಬಹುದು?
- ಖರೀದಿರಿಸಿದ ಮಣಿಗಳನ್ನು ಒಂದು ಸರಿಗೆಯಲ್ಲಿ 5 ರಂತೆ 8 ಸರಿಗೆಯಲ್ಲಿ ಸುರಿದನು. ಬಾಕಿ ಇರುವ ಮಣಿಗಳು ಎಷ್ಟು?

## ಸಮಯ ಎಷ್ಟು?




ನೀವು ಹೇಳುವಿರಾ?

| | |
|---|---|
| ಪ್ರವಾಸ ಆರಂಭಿಸಿದ ಸಮಯ | |
| ಚಹಾ ಕುಡಿದ ಸಮಯ | |
| ಮೃಗಾಲಯಕ್ಕೆ ತಲುಪಿದ ಸಮಯ | |
| ಪಾರ್ಕ್‌ಗೆ ತಲುಪಿದ ಸಮಯ | |
| ಹಿಂತಿರುಗಿದ ಸಮಯ | |

ನೀವು ದಿವಸವೂ ಮಾಡುವ ಪ್ರಧಾನ ಕೆಲಸಗಳನ್ನು ಬರೆದು ಸಮಯ ಬರೆಯಿರಿ.



## ಮಾಡಿ ನೋಡುವಾ

### ಬಾಕಿ ಎಷ್ಟು?

ಮಿನ್ನು 2 ರೂಪಾಯಿ ಬೆಲೆಯ 3 ಪೆನ್ಸಿಲ್ 5 ರೂಪಾಯಿ ಬೆಲೆಯ 4 ಪೆನ್ನುಗಳನ್ನು ಖರೀದಿಸಿದನು. ಅಂಗಡಿಯವನಿಗೆ 50 ರೂಪಾಯಿ ನೀಡಿದನು. ಅವನಿಗೆ ಬಾಕಿ ಸಿಕ್ಕಿದ ಹಣ ಎಷ್ಟು?

### 100 ರೂಪಾಯಿ ಸಾಕಾಗಬಹುದೇ?


ಜಾಫರ್ 35 ರೂಪಾಯಿ ಬೆಲೆಯ ಆಟಿಕೆಗಳನ್ನು 5 ರೂ ಬೆಲೆಯ 3 ಪೆನ್ಸಿಲ್ 10 ರೂಪಾಯಿ ಬೆಲೆಯ 3 ಚೆಂಡು ಖರೀದಿಸಿದನು. ಅವನ ಬಳಿ ಇರುವ 100 ರೂಪಾಯಿ ಸಾಕಾಗಬಹುದೇ?

### ಖರ್ಚು ಎಷ್ಟು?

ರಹೀಂ 2 ರೂಪಾಯಿ ಬೆಲೆಯ 10 ಪುಗ್ಗೆ ಖರೀದಿಸಿದನು. ಚಿನ್ನು 10 ರೂಪಾಯಿ ಬೆಲೆಯ ಎರಡು ಬಳೆ ಖರೀದಿಸಿದಳು. ಪ್ರತಿಯೊಬ್ಬರೂ ಎಷ್ಟು ರೂಪಾಯಿ ಖರ್ಚು ಮಾಡಿರಬಹುದು?

### ಮಣಿಗಳನ್ನು ರಚಿಸಿರಿ

ಮಾದರಿಯಂತೆ ಉತ್ತರವಾಗಿ ಲಭಿಸುವ ಮಣಿಗಳ ಚಿತ್ರ ರಚಿಸಿರಿ.




### ಹಾಡುವ, ನಲಿಯುವ

ಗುಡ್ಡದ ಮೇಲಿನ ಹೂಮರದಲ್ಲಿ
ಗಿಳಿಮರಿಯೆಲ್ಲವು ಕುಳಿತಿಹವು
ಒಂದನೆ ಗೆಲ್ಲಲಿ ಎರಡು ಗಿಳಿ
ಹತ್ತಿರ ಹತ್ತಿರ ಕುಳಿತಿಹವು
ಎರಡನೆ ಗೆಲ್ಲಲಿ ಎರಡರ ಗುಂಪು
ಹಾಡನು ಹಾಡುತ ಕುಳಿತಿಹವು
ಎರಡರ ಗುಂಪು ಎರಡಿಹವು
ಮರಿಗಿಳಿಗಳೂ ನಾಲ್ಕಿಹವು
ಮೂರನೆ ಗೆಲ್ಲಲಿ ಮೂರು ಗುಂಪು
ಹಣ್ಣನು ಕ್ಕುಕ್ಕುತ ತಿನ್ನುವವು
ಎರಡರ ಗುಂಪು ಮೂರಿಹುದು
ಮರಿ ಗಿಳಿಗಳ ಸಂಖ್ಯೆಯು ಆರಿಹುದು
ನಾಲ್ಕನೆ ಗೆಲ್ಲಲಿ ನಾಲ್ಕು ಗುಂಪು
..........................................................
..........................................................